# ಕಸ್ತೂರ್‌ಬಾ v/s ಗಾಂಧಿ



■ ಬರಗೂರು ರಾಮಚಂದ್ರಪ್ಪ
ಕಲೆ: ಮನೋಹರ ಕೆ. ಆಚಾರ್ಯ

## ಅಂಬೇಡ್ಕರ್ ಮನೆಯಲ್ಲಿ ಕಸ್ತೂರ್!

'ಬೆಳವಣಿಗೆ ಹೆಸರಲ್ಲಿ ಬಂಧಿ ಆಗಿರಲಾರೆ, ಬರ್ತೀನಿ' ಎಂದು ಅಪ್ಪನ ತತ್ವಗಳನ್ನು ವಿರೋಧಿಸಿ ಹರಿಲಾಲ್ ಊರಿಗೆ ಹೊರಟು ನಿಂತಾಗ, ತಾಯಿ ಹೃದಯ ತತ್ತರಿಸಿತು.

ಅಡಕತ್ತರಿಯಲ್ಲಿ ಸಿಕ್ಕಿದ ಅಮ್ಮ
ಹರಿಲಾಲನದು ದಂಡಿನಂಥ ಮಾತು
ಮೌನವಾದರು ತಾಯಿ ತತ್ತರಿಸಿ ಕೂತು.

***

ನೆನಪು ನುಗ್ಗಿ ಬಂದು ಜಗ್ಗಿದವು
ತಲ್ಲಣಿಸಿ ತನುಮನ ಕುಗ್ಗಿದವು
ನೈತಿಕತೆಯದೂ ಕಗ್ಗಂಟಿನ ಕತೆಯೆ?
ತೂಗುಯ್ಯಾಲೆಯ ಒಳತೋಟಿ ವ್ಯಥೆಯೆ?
ಅಯ್ಯೊ! ನೈತಿಕತೆಯೇ
ನಿಘಂಟಿಗೆ ನೀನು ದೂರವೇ?

ಕಸ್ತೂರ್‌ಬಾ ಯೋಚಿಸಿದರು. ಗಾಂಧಿ ಹೇಳಿದ್ದು ನೈತಿಕತೆಯಾದರೆ ತಾನು ಹೇಳಿದ್ದು ನೈತಿಕತೆಯಲ್ಲವೆ? ಮತ್ತೂ ಯೋಚಿಸಿದರು. ಅವರದು ಸಮಾಜದ ನಡುವೆ ನಿಂತ ನೈತಿಕತೆ; ತನ್ನದು ಸಂಸಾರದ ನಡುವೆ ನಿಂತ ನೈತಿಕತೆ. ಒಂದು ನೈತಿಕತೆ ಉಳಿಯಲು ಇನ್ನೊಂದು ನೈತಿಕತೆಯನ್ನು ನುಂಗಬೇಕೆ? ಯೋಚಿಸುತ್ತಾ ಯೋಚಿಸುತ್ತಾ 'ಗಾಂಧಿನೈತಿಕತೆ'ಯನ್ನು ಅರ್ಥಮಾಡಿಕೊಂಡರು. ನಿಸ್ವಾರ್ಥವೇ ನೈತಿಕತೆ ಎಂದುಕೊಂಡರು. ಹಾಗೆಂದು ತಾನೇನು ಸ್ವಾರ್ಥಿಯಾಗಿರಲಿಲ್ಲ. ಮಗನ ಅಭ್ಯುದಯಕ್ಕೆ ಹಂಬಲಿಸುವುದು ಸ್ವಾರ್ಥವಾದರೆ ತಾನು ಹೇಗೆ ತಾಯಿಯಾದೇನು?

ನೈತಿಕತೆಯ ಬಿಕ್ಕಟ್ಟಿನಲ್ಲಿ ಬೆವರಾದರು.

ಭಾವುಕತೆಯ ಬಯಲಲ್ಲಿ ತಾಯಿತವರಾದರು

ಕಸ್ತೂರ್‌ಬಾ ನಿಧಾನವಾಗಿ ಚೇತರಿಸಿಕೊಂಡರು. ಕಿರಿಯ ಮಗ ದೇವದಾಸ್ ಬಂದು 'ಅಮ್ಮ ಸಮಾಧಾನ ಮಾಡ್ಕೊ' ಅಂದಾಗ ಆತನ ತಲೆಸವರಿ ಮುರಿದ ಮಂದಹಾಸಕ್ಕೆ ಮುಖವಾಗಲು ಕಷ್ಟಪಟ್ಟರು. ದೇವದಾಸ್‌ಗೆ ಅಮ್ಮನ ಕಷ್ಟ ಅರ್ಥವಾಯಿತು. ಹೆಚ್ಚು ಮಾತಾಡದೆ ಅಮ್ಮನ ಜೊತೆ ಕೂತ. ಮಾತಿಗಿಂತ ಸಾಮೀಪ್ಯದ ಮೌನವೇ ಸಾಂತ್ವನ ಎಂದು ಭಾವಿಸಿದ.

* * *

ಸಬರಮತಿ ಆಶ್ರಮದ ಕತ್ತಲ ಕೆರೆಯಲ್ಲಿ ನೆನಪಿನದೋಣಿ ನಿಧಾನವಾಗಿ ನಿಂತು ಬಿಟ್ಟಿತು. ಕಸ್ತೂರ್‌ಬಾ, ಗಾಂಧಿ ಕಡೆ ನೋಡಿದರು. 'ಹರಿಲಾಲ್ ಬದುಕು ಹಾಗೆಲ್ಲ ಆಗಬಾರದಿತ್ತು' ಎಂದರು. ಗಾಂಧಿ ಮಾತಾಡದೆ ನೋಡಿದರು. ಕಸ್ತೂರ್‌ಬಾಗೆ ಮಾತಾಡಲೇಬೇಕೆಂಬ ಒತ್ತಡವಿದೆಯೆಂದು ಗಾಂಧಿ ಮನಸ್ಸು ಹೇಳುತ್ತಿತ್ತು. ಹೀಗಾಗಿ ಕಸ್ತೂರ್‌ಬಾ ಭಾವನೆಗಳೆಲ್ಲ ಹೊರಬಂದು ಈಗಲಾದರೂ ಹಗುರವಾಗಲಿ ಎಂದು ಸುಮ್ಮನೆ ಕೂತರು. ಕಸ್ತೂರ್‌ಬಾ ಕಡೆ 'ನುಡಿ ನಿರೀಕ್ಷೆಯ ನೋಟ' ಬೀರಿದರು.

ಕಸ್ತೂರ್‌ಬಾ ಮಾತು ಮುಂದುವರಿಸಿದರು: 'ನನ್ನ ಬದುಕು ಹೀಗಾಯ್ತು. ಒಂದು ಕಡೆ ತಾಯಿ ಆಗಿ ಹರಿಲಾಲ್‌ಗೆ ಉತ್ತರ ಕೊಡಬೇಕು. ಇನ್ನೊಂದ್ಕಡೆ ನಿಮ್ ಮಾತಿಗ್ ಬೆಲೆ ಕೊಡ್ಬೇಕು. ನೀವೇನೋ ಮಗನ ಜೊತೆ ಸಂಬಂಧ ಇಲ್ಲ ಅಂತ ಹೇಳ್‌ಬಿಟ್ರಿ. ನಾನು ತಾಯಿ; ಕರುಳುಬಳ್ಳಿ ಸಂಬಂಧಾನ ಕತ್ತರಿಸಿಕೊಳ್ಳೋಕೆ ಆಗುತ್ತ? ಯಾವತ್ತೂ ಆಗಲ್ಲ ಬಾಪು.'

ಕಸ್ತೂರ್‌ಬಾ ಗದ್ಗದಿತರಾಗಿದ್ದರು. ಗಾಂಧಿಯ ಕೊರಳು ನರಳಿತು.

'ನನಗೂ ಆಗಲ್ಲ ಕಸ್ತೂರ್. ಆದ್ರೆ ಆದರ್ಶ ಅಂತ ಒಂದಿರುತ್ತಲ್ಲ, ಅದು ಕಟುವಾಗ್ ಮಾತಾಡಿಸಿಬಿಡುತ್ತೆ' ಎಂದರು ವ್ಯಥೆಯನ್ನು ಹೊರಹಾಕುತ್ತ.

ಕಸ್ತೂರ್‌ಬಾ ಅವರ ಇಷ್ಟು ವರ್ಷಗಳ ಬದುಕು ನಿಜಗಳನ್ನು ನಾಟಿಸಿತ್ತು. ಕಟು ವಾಸ್ತವಗಳ ಉರಿಯಲ್ಲಿ ವ್ಯಕ್ತಿತ್ವ ರೂಪುಗೊಂಡಿತ್ತು.

ಹೀಗಾಗಿ ನಿಜದ ನೆಲೆಗಳನ್ನು ಅಪ್ಪಿಕೊಳ್ಳುವ ಅನಿವಾರ್ಯ ಅರ್ಥವಾಗಿತ್ತು. ಈ ನೆಲೆಯಲ್ಲೇ ಪ್ರತಿಕ್ರಿಯಿಸಿದರು:

'ಅದೂ ಒಂದ್ ರೀತಿ ನಿಜ ಬಾಪು. ನಿಮಗಂತೂ ಗೃಹ ಮತ್ತು ಕಾರಾಗೃಹದ ನಡುವೆ ವ್ಯತ್ಯಾಸವೇ ಇಲ್ಲ. ಯಾವಾಗ ಇಲ್ಲಿರ್ತೀರಿ, ಯಾವಾಗ ಅಲ್ಲಿರ್ತೀರಿ ಹೇಳೋಕಾಗೊಲ್ಲ. ಹಾಗೇ ಹೋರಾಟ ಮಾಡ್ತ ಒಂದ್ ಸಾರಿ ಪುಣೆ ಕಾರಾಗೃಹಕ್ಕೆ ಹೋದ್ರಿ. ಅದೇನೊ ಅಂಬೇಡ್ಕರ್ ಡಾಕ್ಟರ್ ಜತೆ ವ್ಯತ್ಯಾಸ ಮಾಡ್ಕೊಂಡು ಅಲ್ಲೇ ಉಪವಾಸ ಸತ್ಯಾಗ್ರಹ ಆರಂಭಿಸಿಬಿಟ್ರಿ. ಅದೂ ಆಮರಣಾಂತ ಉಪವಾಸ... ನಿಮ್ಮಿಬ್ರ ಮಧ್ಯೆ ಅದೇನ್ ಜಗಳಾನೊ ಭಿನ್ನಾಬಿಪ್ರಾಯನೊ... ನಾನು ಅಲ್ಪಮತಿ, ಅರ್ಥ ಆಗ್ಲಿಲ್ಲ.'

ಎಂದು ಕಸ್ತೂರ್‌ಬಾ ನಿಟ್ಟುಸಿರುಬಿಟ್ಟರು. ಅಲ್ಪಮತಿ ಅಂತ ತಮ್ಮನ್ನು ತಾವು ಸಹಜವಾಗಿಯೇ ಕರೆದುಕೊಂಡಿದ್ರು. ಯಾಕೆಂದರೆ ಅಂಬೇಡ್ಕರ್ ಅವರು ಏನು ಹೇಳಿದ್ದರು, ಗಾಂಧಿಯವರು ಏನನ್ನು ಬೇಡ ಎಂದರು ಎಂಬ ವಿವರಗಳ ಪರಿಚಯ ಕಸ್ತೂರ್‌ಬಾ ಅವರಿಗೆ ಅಷ್ಟಾಗಿ ಆಗಿರಲಿಲ್ಲ. ಆದರೆ ಗಾಂಧಿಯವರಿಗೆ ಕಸ್ತೂರ್ ಬಾ ಅವರನ್ನು 'ಅಲ್ಪಮತಿ' ಎಂದು ಒಪ್ಪಿಕೊಳ್ಳಲು ಆಗಲಿಲ್ಲ.

'ನೀನು ಅಲ್ಪಮತಿ ಅಂತ ಯಾಕ್ ಅಂದ್ಕೊಳ್ತೀಯ. ನಿನ್ನ ಜ್ಞಾನಾನೂ ದೊಡ್ಡದು' ಎಂದರು.

'ಏನು ದೊಡ್ಡದೋ ಏನ್ಕತೆಯೋ? ನಾನ್ ಓದಿದ್ದು ಅಷ್ಟರಲ್ಲೇ ಇದೆ.'

'ಜ್ಞಾನಕ್ಕೆ ಶಾಲಾ ಕಾಲೇಜು ಓದಿದ್ದು ಮಾತ್ರ ಮಾನದಂಡ ಅಲ್ಲ. ನೀನು ದೊಡ್ಡದಾಗಿ ಶಿಕ್ಷಣ ಪಡೀಲಿಲ್ಲ. ನಿಜ. ಆದ್ರೆ ನಿನ್ನ ಜ್ಞಾನ ಶಕ್ತಿ ಕಡಿಮೆ ಅಲ್ಲ.'

ಕಸ್ತೂರ್‌ಬಾ ವಿಷಾದದ ಸಣ್ಣ ನಗುವಿನೊಂದಿಗೆ, 'ವಯಸ್ಸಾದ್ ಮೇಲೆ ಹೊಗಳಿದ್ರೇನ್ ಬಂತು!' ಎಂದರು.

ಆಗ ಗಾಂಧಿ ನೆನಪಿಸಿದರು:

ಹಿಂದೇನೂ ಹೊಗಳಿದ್ದೀನಿ ನಿನ್ನನ್ನ. **Model of true Education** ಅಂದಿದ್ದೀನಿ ನಿನ್ನ ಬಗ್ಗೆ. ಅಂದ್ರೆ ನಿಜವಾದ ಶಿಕ್ಷಣದ ಮಾದರಿ ನೀನು.

ಕಸ್ತೂರ್‌ಬಾಗೆ ಸಂತೋಷವೇನೊ ಆಯಿತು. ಆದರೆ ಗಾಂಧಿಯ ಬಾಳಸಂಗಾತಿಯಾಗಿ ಯಾವಾಗ ಸಂತೋಷವೋ ಯಾವಾಗ ಸಂಕಟವೋ ಹೇಳೋಕಾಗಲ್ಲ ಅನ್ನೋ ಅಳುಕೂ ಇತ್ತು. ಅದನ್ನು ವ್ಯಕ್ತಪಡಿಸಿಯೇ ಬಿಟ್ಟರು:

'ಒಂದ್ಸಾರಿ ಹೀಗೆ, ಇನ್ನೊಂದ್ಸಾರಿ ಹಾಗೆ, ಹೇಳ್ತಾನೇ ಇರ್ತೀನಿ ನೀವು. ನನಗೆ ಆನಂದ ಪಡಬೇಕೋ ಆತಂಕ ಪಡಬೇಕೋ ಅಂತಾನೇ ಅರ್ಥವಾಗಲ್ಲ. ಯಾಕೆಂದ್ರೆ ಆನಂದದ ಹಿಂದೆ ಆತಂಕ, ಆತಂಕದ ಹಿಂದೆ ಆನಂದ. ಇದು ನನ್ನ ಬದುಕಿನ ಅನುಭವ ಬಾಪು.'

ಆಗ ಗಾಂಧಿ ಒಟ್ಟು ಬದುಕಿನ ತತ್ವಜ್ಞಾನವನ್ನೇ